# ಕುರಿ ಮತ್ತು ಮೇಕೆಗಳ ರೋಗಗಳು ಮತ್ತು ಲಸಿಕೆಗಳು



ಡಾ॥ ಆದರ್ಶ ನ್ಯೂಲ್ವಿ,
ಪಶು ವೈದ್ಯಾಧಿಕಾರಿ

# ರೋಗ ಎಂದರೇನು?

ಆರೋಗ್ಯ - ಸಹಜ ದೇಹದ ಸ್ಥಿತಿ


ಅನಾರೋಗ್ಯ/ ರೋಗ/ ಖಾಯಿಲೆ/ ಬೇನೆ - ಅಸಹಜ ದೇಹದ ಸ್ಥಿತಿ





# ರೋಗದ ವರ್ಗೀಕರಣ

- ಸೋಂಕು- ವೈರಸ್, ಬ್ಯಾಕ್ಟೀರಿಯಾ, ಫಂಗಸ್ (ಶಿಲೀಂದ್ರ)
- ಪರಾವಲಂಬಿ ಜೀವಿಗಳು –
  ಒಳ - ದುಂಡು, ಪಟ್ಟಿ, ಚಪ್ಪಟೆ ಹುಳು,
  ಹೊರ - ಉಣ್ಣೆ, ಹೇನು, ನೊಣ
- ಆನುವಂಶಿಕ/ ಜನನ ದೋಷಗಳು - ಗುದನಾಳ ಗೊರೆ
- ಜೀವನ ಶೈಲಿ ರೋಗಗಳು/ ಅನಾಹುತಗಳು- ಆಮ್ಲವ್ಯಾದಿ, ಗಾಯಗಳು ಮತ್ತು ಹುಳುಕಾಗುವುದು, ಕೊಟ್ಟಿಗೆ ರೋಗ, ಅಪೌಷ್ಟಿಕತೆ






# ರೋಗ ಉಂಟಾಗುವ ವಿಧಾನ

ನೀರು
ಆಹಾರ
ಗಾಳಿ
ರೋಗಗ್ರಸ್ತ ಪಶುವಿಗೆ ನೇರ ಸಂಪರ್ಕ
ಉಣ್ಣೆ, ನೊಣಗಳಿಂದ






# ರೋಗ ತಡೆಗಟ್ಟಲು ಕ್ರಮಗಳು

1. ಸ್ವಚ್ಛತೆ - ಕೊಟ್ಟಿಗೆ ಮತ್ತು ಸುತ್ತಲಿನ ಪ್ರದೇಶ
2. ಪ್ರತ್ಯೇಕೀಕರಣ
3. ಲಸಿಕೆ & ಜಂಟುನಶಕ ಬಳಕೆ







# ರೋಗ ನಿಯಂತ್ರಿಸಲು

1. ಪ್ರತ್ಯೇಕೀಕರಣ
2. ಸೂಕ್ತ ಔಷಧೋಪಚಾರ
3. ಪೋಷಕ ಆಹಾರ

## ಪೋಷಕ ಆಹಾರ ತಯಾರಿಸುವ ವಿಧಾನ

| | |
|---|---|
| ರಾಗಿ/ಜೋಳದ ಹಿಟ್ಟು | 1ಕೆಜಿ |
| ಬೆಲ್ಲ | 1ಕೆಜಿ |
| ಉಪ್ಪು | 10ಗ್ರಾಂ |
| ಅಡಿಗೆ ಸೋಡಾ | 5ಗ್ರಾಂ |



ನೀರಿನಲ್ಲಿ ಬೆರೆಸಿ ಕುದಿಸಿ ಕುಡಿಸಬೇಕು

ಪ್ರತಿ ಕುರಿಗೆ 200 ರಿಂದ 500 ಮಿ.ಲಿ ಕೂಡಿಸಬಹುದು

# ರೋಗಗ್ರಸ್ತ ಪಶುಗಳ ಲಕ್ಷಣಗಳು

| ಲಕ್ಷಣ | ಆರೋಗ್ಯ ಪ್ರಾಣಿಗಳು | ರೋಗಗ್ರಸ್ಥ ಪ್ರಾಣಿಗಳು |
|---|---|---|
| ಮುಖಲಕ್ಷಣ | ಚುರುಕು | ಬಲಹೀನ/ಸೋಮಾರಿತನ |
| ತಲೆ | ನೆಟ್ಟಗೆ ಇರುವುದು | ಬಗ್ಗಿ ಇರುವುದು |
| ಕಣ್ಣು | ಪ್ರಕಾಶವಾಗಿ ಹೊಳೆಯುವುದು | ಮಂಕಾಗಿ–ಬಿಳಿ ಬಣ್ಣದ ಸ್ರವಣ |
| ಕಣ್ಣಿನ ಲೋಳ್ಪೊರೆ | ಸಾಮಾನ್ಯ | ರಕ್ತಗಟ್ಟಿಕೆ/ಬಿಳಿಚಿದ |
| ಮೂಗು | ವಿಸರ್ಜನವಿಲ್ಲ | ಲೋಳೆಯುಕ್ತ ವಿಸರ್ಜನೆ |
| ಹಿಕ್ಕೆ ಹಾಕುವುದು | ಸಾಮಾನ್ಯ | ಮಲಕಟ್ಟು/ಬೇದಿ/ಅಮಶಂಕೆ/ರಕ್ತ ಅತೀಸಾರ |
| ನಾಡಿ (/ನಿಮಿಶ) | 70–80 | ಹೆಚ್ಚಾಗಿರುವುದು |
| ಉಷ್ಣಾಂಶ (ಲಿಫಾ) | ಕುರಿ–102.4 ಮೇಕೆ–103.8 | ಹೆಚ್ಚಾಗಿರುವುದು |
| ಉಸಿರಾಟ(/ನಿಮಿಷ) | 12–30 | ಹೆಚ್ಚಾಗಿರುವುದು/ಕಷ್ಟ |
| ಚಲನ | ಚುರುಕಾಗಿರುವುದು | ಕುಂಟುವುದು |
| ಮೇಯುವಿಕೆ | ಸಾಮಾನ್ಯ | ಅಸಾಮಾನ್ಯ |
| ಮೆಲುಕುಹಾಕುವುದು | ಸಾಮಾನ್ಯ | ಅಸಾಮಾನ್ಯ |
| ಚರ್ಮ | ಹೊಳಪುಳ್ಳ ಆರೋಗ್ಯವಾದ ಚರ್ಮ | ಪರಾವಲಂಬಿಗಳು ಹರಡಿದ ಚರ್ಮ |

# ಪಿ.ಪಿ.ಆರ್. ರೋಗ

## “ಪೆಸ್ಟಿಡೆಸ್ ಪೆಟಿಟ್ಸ್ ರೂಮಿನೆಂಟ್ಸ್”

“ಮಾರ್ಬಿಲಿ (ಪ್ಯಾರಾ ಮಿಕ್ಸೋವೈರಸ್)”

ಕುರಿ ಮತ್ತು ಆಡುಗಳಲ್ಲಿ ಕಂಡುಬರುವ ರೋಗ.

1987 ರಲ್ಲಿ ಪ್ರಥಮವಾಗಿ ಕಂಡುಬಂದಿದೆ.

# ಪಿ.ಪಿ.ಆರ್. ರೋಗ

- ವೈರಾಣುಗಳಿಂದ ಉಂಟಾಗುವ ರೋಗ
- ಕುರಿ/ಆಡುಗಳಲ್ಲಿ ಮರಣವನ್ನು ತಂದೊಡ್ಡುವ ಮೂಲಕ ಆರ್ಥಿಕ ಹಾನಿ ಉಂಟು ಮಾಡುವಂತಹ ಸಾಂಕ್ರಾಮಿಕ ರೋಗ.

# ಪಿ.ಪಿ.ಆರ್. ರೋಗ



ಹೆಚ್ಚಿನ ಜ್ವರ, ಮೂಗಿನಿಂದ ಕೀವಿನಂತಹ ಹಳದಿ ದ್ರವ ಸುರಿಯುವಿಕೆ, ಕಣ್ಣಿನಿಂದ ನೀರು ಸುರಿಯುವಿಕೆ, ವಸಡಿನ ಮೇಲೆ ಹುಣ್ಣು, ವಾಸನೆ ಯುಕ್ತ ಬೇದಿ/ಆಮಶಂಕೆ ಬೇಧಿ.

# ಮುಂಜಾಗ್ರತಾ ಕ್ರಮಗಳು

ಈ ರೋಗವು ಗಾಳಿ, ನೀರು, ಕಲುಶಿತ ಸೋಂಕುಯುಕ್ತ ಆಹಾರ ಸೇವನೆ, ನೇರ ಸಂಪರ್ಕ, ಕಣ್ಣು / ಮೂಗಿನಿಂದ ಸೋರುವ ದ್ರವ, ಹಿಕ್ಕೆ, ಮುಂತಾದವುಗಳಿಂದ ಹರಡುತ್ತದೆ.

ಆದ್ದರಿಂದ ಸೋಂಕು ಯುಕ್ತ ಪ್ರದೇಶದಲ್ಲಿ ಕುರಿ ಆಡುಗಳನ್ನು ಕರೆದೊಯ್ಯಬಾರದು.

ಪ್ರತಿವರ್ಷ ಆಗಸ್ಟ್ –ಸೆಪ್ಟೆಂಬರ್ ತಿಂಗಳಲ್ಲಿ ರೋಗನಿರೋಧಕ ಲಸಿಕೆ ಹಾಕಿಸಬೇಕು.

ನಾಲ್ಕು ತಿಂಗಳು ಮೇಲ್ಪಟ್ಟ ಎಲ್ಲಾ ಕುರಿ ಮತ್ತು ಮೇಕೆಗಳಿಗೆ ತಪ್ಪದೇ ಪಿ.ಪಿ.ಆರ್ ನಿರೋಧಕ ಲಸಿಕೆಯನ್ನು ಹಾಕಿಸಬೇಕು.

" ಲಸಿಕೆ ಹಾಕಿಸಲು ಆಗಸ್ಟ್– ಸೆಪ್ಟೆಂಬರ್ ಸಕಾಲ "

ಲಸಿಕೆ ಹಾಕಿಸುವ 15 ದಿನಗಳ ಮುನ್ನ ಕುರಿ– ಆಡುಗಳಿಗೆ ಜಂತುನಾಶಕ ಕುಡಿಸುವುದರ ಮೂಲಕ ಲಸಿಕೆಯಿಂದ ಲಭಿಸುವ ನಿರೋದಕತ್ವ ಹೆಚ್ಚಿಸಬಹುದು

# ನೀಲಿ ನಾಲಿಗೆ ರೋಗ

## ಆರ್ಬಿವೈರಸ್ (ಜೀನಸ್: ರಿಯೋವಯರಿಡೇ)

- ಕುರಿಗಳಲ್ಲಿ ಕಂಡುಬರುವ ಸಾಂಕ್ರಾಮಿಕ ರೋಗ.
- ಈ ರೋಗವು ಕುರಿ ಸಾಕಾಣಿಕಾ ಕ್ಷೇತ್ರದಲ್ಲಿ ಹೆಚ್ಚಿನ ಆರ್ಥಿಕ ಹಾನಿ ಉಂಟುಮಾಡುತ್ತದೆ.
- 1964 ರಲ್ಲಿ ಪ್ರಥಮವಾಗಿ ಭಾರತದಲ್ಲಿ ಕಂಡುಬಂದಿದೆ.
- ಕರ್ನಾಟಕದಲ್ಲಿ ಪ್ರಥಮವಾಗಿ 1982 ರಲ್ಲಿ ಬೀದರ /ಗುಲ್ಬರ್ಗಾ ಜಿಲ್ಲೆಗಳಲ್ಲಿ ಕಂಡುಬಂದಿದೆ.
- ಇದು ಅಂಟುರೋಗವಲ್ಲ.
- ಈ ರೋಗವು ಕ್ಯೂಲಿಕಾಯ್ಡಿಸ್ ಎಂಬ ಕುರುಡು ನೊಣದ ಕಡಿದ ಮೂಲಕ ಉಂಟಾಗುತ್ತದೆ.


ASM MicrobeLibrary.org © Walton and Suchman



- ಮಳೆಗಾಲ ಕಳೆದ ನಂತರ ಸಾಮಾನ್ಯವಾಗಿ ಅಕ್ಟೋಬರ್– ನವೆಂಬರ್ ಮಾಹೆಯಲ್ಲಿ ಕಾಣಿಸಿಕೊಳ್ಳುತ್ತದೆ.
- ದೇಶಿ ಕುರಿಗಳು, ಮಿಶ್ರತಳಿ ಕುರಿಗಳಲ್ಲಿ ಈ ರೋಗದ ತೀವ್ರತೆ ಹೆಚ್ಚಾಗಿದ್ದರೂ, ದೇಶೀಯ ಕುರಿಗಳು ಈ ರೋಗದಿಂದ ನರಳುತ್ತವೆ.
- ರೋಗದ ತೀವ್ರತೆಯಿಂದಾಗಿ, ಉಣ್ಣೆ ಇಳುವರಿ, ಮಾಂಸದ ಇಳುವರಿ, ಚರ್ಮದ ಗುಣಮಟ್ಟದಲ್ಲಿ ವೆತ್ಯಾಸ, ಹಾಗೂ ಕುರಿಗಳ ಮರಣದಿಂದಾಗಿ ಹೆಚ್ಚಿನ ಆರ್ಥಿಕ ನಷ್ಟ ಉಂಟಾಗುತ್ತದೆ.

• ರೋಗ್ರಸ್ಥ ಕುರಿಗಳನ್ನು ಬೇರ್ಪಡಿಸಿ, ಚಿಕಿತ್ಸೆ ಕೊಡಿಸಿ

• ತೆಳು ನೇರಳೆಬಣ್ಣದ ದ್ರಾವಣದಲ್ಲಿ ಬಾಯಿ(ನಾಲಿಗೆ– ವಸಡು) ಶುಚಿಗೊಳಿಸಿ.

* ರಾಗಿ/ಜೋಳದ ಹಿಟ್ಟಿನ ಗಂಜಿ ಮಾಡಿ ಅದಕ್ಕೆ ತುಸು ಅಡಿಗೆಸೋಡ/ಉಪ್ಪು ಬೆರೆಸಿ ಕುಡಿಸಿ.

ಮುಂಜಾಗ್ರತಾ ಕ್ರಮಗಳು:

•ಜೌಗು ಪ್ರದೇಶದಲ್ಲಿ ಟಥವಾ ನೀರು ನಿಂತ ಪ್ರದೆಶದಲ್ಲಿ ಕುರಿಗಳನ್ನು ಮೇಯಲು ಬಿಡಬೇಡಿ.

•ಸಂಜೆಯ ಹೊತ್ತಿನಲ್ಲಿ ಹಟ್ಟಿಯಲ್ಲಿ ಬೇವಿನ ಹೊಗೆ ಹಾಕಿ.

•ಮಳೆಗಾಲದಲ್ಲಿ ಉಣ್ಣೆ ಕತ್ತರಿಸಬೇಡಿ.

•ನಿಂತನೀರಿಗೆ ಬಿ.ಹೆಚ್.ಸಿ ಪುಡಿ/ ಸೀಮೆಎಣ್ಣೆ ಸಿಂಪಡಿಸಿ.

# ಕುರಿ ಸಿಡುಬು ಬೇನೆ

## "ಕ್ಯಾಪ್ರಿ ಪಾಕ್ಸ್"

- ಈ ರೋಗವು ಎಳೆಯ ವಯಸ್ಸಿನ ಕುರಿಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ.

- ಈ ರೋಗವು ಗಾಳಿ, ಸೊಂಕು ಗ್ರಸ್ಥ ಕುರಿಯಲ್ಲಿ ಉಂಟಾದ ಬೊಕ್ಕೆಗಳ ಹೊಟ್ಟು, ಸಿಂಬಳ, ಜೊಲ್ಲು ಹಾಗೂ ಸಂಪರ್ಕದಿಂದ ಹರಡುತ್ತದೆ.


- ಅತಿಯಾದ ಜ್ವರ, ಮಂಕಾಗುವಿಕೆ, ಕಣ್ಣು ಮೂಗಿನಿಂದ ನೀರು ಸೋರುವಿಕೆ, ಕಣ್ಣು ಮೂಗಿನ ಸುತ್ತ, ತುಟಿ, ಬಾಯಿ ಮೂಗಿನ ಹೊಳ್ಳೆಗಳ ಮೇಲೆ, ಹೊಟ್ಟೆಯ ತಳಭಾಗ, ಬಾಲದ ಬುಡ, ತೊಡೆಯಮೇಲೇ ಹಾಗೂ ಉಣ್ಣೆ ಬೆಳೆಯದಂತಹ ಜಾಗಗಳಲ್ಲಿ ಬೊಬ್ಬೆಗಳುಂಟಾಗಿ ಇವು ಒಡೆದು ಬೊಕ್ಕೆಗಳು ಹಾಗೂ ವ್ರಣಗಳಾಗುತ್ತವೆ.

# ಕುರಿಸಿಡುಬು ರೋಗಗ್ರಸ್ಥ ಕುರಿ






# ಮೂಗು ಬಾಯಿಯ ಸುತ್ತ ಗುಳ್ಳೆಗಳು




# ಹೊಟ್ಟೆಯ ತಳಭಾಗದಲ್ಲಿ ಗುಳ್ಳೆಗಳು



# ಬಾಲದ ಬುಡದಲ್ಲಿ ಗುಳ್ಳೆಗಳು







## ಕುರಿ ಸಿಡುಬುರೋಗ ನಿರೋಧಕ ಲಸಿಕೆ




ರೋಗ ಕಾಣಿಸಿಕೊಳ್ಳುವ ಸ್ಥಳಗಳಲ್ಲಿ

# ಕುರಿಗಳಿಗೆ ತಪ್ಪದೇ ಡಿಸೆಂಬರ್ ಮಾಹೆಯಲ್ಲಿ ಲಸಿಕೆ ಹಾಕಿಸಿ.

# ಕಾಲು–ಬಾಯಿ ಜ್ವರ

ಈ ರೋಗವು 'ಪಿಕಾರ್ನ ವೈರಸ್' ನಿಂದ ಉಂಟಾಗುವ ರೋಗವಾಗಿದ್ದು , ಸೀಳುಗೊರಸುಳ್ಳ ಪ್ರಾಣಿಗಳಲ್ಲಿ(ದನ, ಎಮ್ಮೆ, ಕುರಿ, ಮೇಕೆ, ಹಂದಿ ಮುಂತಾದವು) ಕಂಡು ಬರುತ್ತದೆ. ಈ ರೋಗವು ಹೆಚ್ಚಿನ ಆರ್ಥಿಕ ಹಾನಿ ಉಂಟು ಮಾಡುವುದರಿಂದ ಪ್ರಾಮುಖ್ಯತೆಯನ್ನು ಪಡೆದಿದೆ. ಈ ರೋಗವು ಸೋಂಕುಯುಕ್ತ ಆಹಾರ ನೀರು ಸೇವನೆ, ಮತ್ತು ಸಂಪರ್ಕದಿಂದ ಉಂಟಾಗುತ್ತದೆ.

## ರೋಗ ಲಕ್ಷಣಗಳು:

ಸಾಮಾನ್ಯ ಲಕ್ಷಣಗಳಾದ ಅತಿ ಹೆಚ್ಚಿನ ಜ್ವರ, ಮಂಕಾಗುವಿಕೆ, ಆಹಾರ ಸೇವನೆಯಲ್ಲಿ ನಿರಾಸಕ್ತಿ, ಕಂಡುಬರುತ್ತದೆ.

ನಂತರ, ನಾಲಿಗೆಯ ಮೇಲೆ ಹಾಗೂ ಒಳ ತುಟಿ, ಒಸಡುಗಳಮೇಲೆ ಬೊಬ್ಬೆಗಳು ಕಾಣಿಸಿಕಂಡು, ಇವು ಒಡೆದು, ವ್ರಣವಾಗುತ್ತದೆ. ಇದರಿಂದಾಗಿ ಆಹಾರ ಸೇವನೆಯಲ್ಲಿ ನಿರಾಸಕ್ತಿಯುಂಟಾಗುತ್ತದೆ. ಬಾಯಿಂದ ನೊರೆಯುಕ್ತ ಅಂಟಾದ ದ್ರವ ಸುರಿಯಲು ಪ್ರಾರಂಭವಾಗುತ್ತದೆ.

ನೋವಿನಿಂದ ಬಾಯಿ ಚಪ್ಪರಿಸುವುದು ಈ ರೋಗದ ಮತ್ತೊಂದು ಲಕ್ಷಣ. ಇದಲ್ಲದೇ,

ಗೊರಸುಗಳ ಮಧ್ಯೆ ಬೊಬ್ಬೆಯುಂಟಾಗಿ, ಇವು ಒಡೆದು, ಹುಣ್ಣಾಗುತ್ತದೆ. ಗಾಯಕ್ಕೆ ಬ್ಯಾಕ್ಟೀರಿಯಾ ಸೊಂಕಿನಿಂದ ನಂಜುಂಟಾಗಿ, ಗಾಯ ಉಲ್ಬಣಗೊಂಡು, ಕೆಟ್ಟ ವಾಸನೆಯಿಂದ ಕೂಡಿರುತ್ತದೆ.

ನೊಣಗಳು ಈಗಾಯವನ್ನು ಮುತ್ತಿ ಮೊಟ್ಟೆ ಇಟ್ಟು, ಮರಿ ಮಾಡಿದ ನಂತರ, ಈಹುಳುಗಳು ಗಾಯವನ್ನು ಸೇರಿ ಮತ್ತಷ್ಟು ಉಲ್ಬಣಗೊಳಿಸುತ್ತವೆ.

ಇದರಿಂದ ಗಾಯ ದೀರ್ಘಕಾಲ ಗುಣವಾಗದೆ ಸಮಸ್ಯೆಯನ್ನು ತಂದೊಡ್ಡುತ್ತದೆ.

ಕಾಲುನೋವಿನಂದ ರೋಗಗ್ರಸ್ಥ ರಾಸು ಕುಂಟಲು ಪ್ರಾರಂಭಿಸುತ್ತದೆ. ನೋವು ಭರಿಸಲಾಗದ ಸಂದರ್ಭಗಳಲ್ಲಿ, ಮಲಗಿಬಿಡುತ್ತದೆ. ಗರ್ಭಧರಿಸಿದ ರಾಸುಗಳು ಕಂದು ಹಾಕುತ್ತವೆ.

# ಕಾಲುಬಾಯಿ ಜ್ವರ – ರೋಗಗ್ರಸ್ಥ ಕುರಿ




30ml.
FOOT AND MOUTH DISEASE
VACCINE I.P. (Vet.)
(OIL ADJUVANTED)
Raksha-Ovac
टीका आई पी (वेट.)
रक्षा - ओवैक
FOOT AND MOUTH
DISEASE VACCINE B.P.(VET.)
(OIL ADJUVANTED)
Raksha-Ovac
मुँह व खुर रोग का ऑयल
एड्ज़ुवेंट टीका बी पी (वेट.)
रक्षा- ओवैक

# ಬ್ಯಾಕ್ಟೀರಿಯಾ ದಿಂದ ಉಂಟಾಗುವ ರೋಗಗಳು

# ಮುಂಜಾಗ್ರತಾ ಕ್ರಮಗಳು

ರೋಗಕಾಣಿಸಿಕೊಳ್ಳುವ ಮುನ್ನವೇ 4 ತಿಂಗಳ ಮೇಲ್ಪಟ್ಟ ಎಲ್ಲಾ ಜಾನುವಾರುಗಳಿಗೆ ವರ್ಷಕ್ಕೆ 2ಬಾರಿ ತಪ್ಪದೇ ರೋಗ ನಿರೋಧಕ ಲಸಿಕೆಯನ್ನು ಹಾಕಿಸಬೇಕು.

ಜಾತ್ರೆ/ ಸಂತೆ ಮುಂತಾದಕಡೆಗಳಿಂದ ಜಾನುವಾರುಗಳನ್ನು ಖರೀದಿಸುವ ಮುನ್ನ ರೋಗ ನಿರೋಧಕ ಲಸಿಕೆ ಹಾಕಿಸಿರುವ ಬಗ್ಗೆ ಖಾತ್ರಿ ಮಾಡಿಕೊಳ್ಳಬೇಕು.

# ಕರಳು ಬೇನೆ

# ಎಂಟೆರೋ ಟಾಕ್ಸೀಮಿಯ (ಇ.ಟಿ.)

ಈ ರೋಗವು ಕ್ಲಾಸ್ಟ್ರೀಡಿಯಂ ಪರ್ ಫ್ರುಂಜೆನಸ್–
ಎಂಬುವ ಬ್ಯಾಕ್ಟೀರಿಯಾ ದಿಂದ ಉಂಟಾಗುತ್ತದೆ.

ಚೆನ್ನಾಗಿ ಮೇಯುವ, ಕೊಬ್ಬಿದ, ಎಲೆಯ ಕುರಿಗಳಲ್ಲಿ ಹೆಚ್ಚಾಗಿ
ಕಾಣಿಸಿಕೊಳ್ಳುತದೆ.

ರೋಗ ಲಕ್ಷಣಗಳು: ಕುರಿ ಮಂಕಾಗುವಿಕೆ, ಮೇವಿನತ್ತ ನಿರಾಸಕ್ತಿ, ಬೇಧಿ ,
ಸುತ್ತಿ ಸುತ್ತಿ ಬಿದ್ದು ಹಠಾತ್ ಮರಣವನ್ನಪ್ಪತ್ತದೆ.

- ಈ ರೋಗವು ‘ಕ್ಲಾಸ್ಟ್ರೀಡಿಯಂ ಪರ್‌ಫ್ರಿಂಜನ್ಸ್’ ಎಂಬ ನಂಜುಕಾರಕ ಬ್ಯಾಕ್ಟೀರಿಯ ದಿಂದ ಉಂಟಾಗುತ್ತದೆ.
- ರೋಗಾಣುಗಳು ಕುರಿಗಳ ಕರುಳಿನಲ್ಲಿ ವೃದ್ಧಿ ಹೊಂದುವ ಮೂಲಕ ವಿಷವಸ್ತುವನ್ನು ಉತ್ಪಾದಿಸುತ್ತವೆ.
- ಈ ವಿಷವಸ್ತು ಕರುಳಿನ ಮೂಲಕ ರಕ್ತಕ್ಕೆ ಸೇರಿ ನಂಜು ಉಂಟುಮಾಡುತ್ತದೆ.
- ಈ ರೋಗವು ದಷ್ಟ ಪುಷ್ಟವಾಗಿ ಬೆಳೆದ, ಹೆಚ್ಚುಮೇಯುವ ಆಸೆ ಬುರುಕ ಕುರಿಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.
- ರೋಗಕಾಣಿಸಿಕೊಂಡಲ್ಲಿ ಹೆಚ್ಚಿನಪಾಲು ಕುರಿಮರಿಗಳು ಕೂಡಲೇ ಮರಣವನ್ನಪ್ಪುತ್ತವೆ

# ದಷ್ಟ –ಪುಷ್ಟವಾದ ಕುರಿಗಳಲ್ಲಿ ಕಾಣಿಸಿಕೊಳ್ಳುತ್ತದೆ





# ರೋಗ ಕುರಿ ಮರಿ



# ರೋಗ ಗ್ರಸ್ತ ಕುರಿ ಮಂಕಾಗುತ್ತದೆ.



# ಬೇಧಿ ಉಂಟಾಗುತ್ತದೆ.



# ಹಠಾತ್ ಮರಣವನ್ನಪ್ಪುತ್ತದೆ.



# ಮುಂಜಾಗ್ರತಾ ಕ್ರಮವಾಗಿ ಲಸಿಕೆ ಹಾಕಿಸಿ




ಕರಳುಬೇನೆ ನಿರೋಧಕ ಲಸಿಕೆ

# ಕರಳುಬೇನೆ ಲಸಿಕೆ ಹಾಕುತ್ತಿರುವುದು



# ಗಳಲೇಬೇನೆ

ಪ್ಯಾಸ್ಚುರೆಲ್ಲಾ ಗುಂಪಿಗೆ ಸೇರಿದ ಬ್ಯಾಕ್ಟೀರಿಯಾದಿಂದ ಉಂಟಾಗುವ ರೋಗ.

**ರೋಗ ಲಕ್ಷಣಗಳು:**

ಮಂಕಾಗುವಿಕೆ, ಉಸಿರಾಟದ ತೊಂದರೆ, ಕೆಮ್ಮು, ಮೂಗುನಿಂದ ಹಳದಿ ಬಣ್ಣದ ದ್ರವ ಸೋರುವಿಕೆ, ಗಂಟಲ ಕೆಳಗೆ ಬಾವು ಕಾಣಿಸಿಕೊಳ್ಳುವಿಕೆ, ಹಾಗೂ ಮರಣ.

'ಪಾಶ್ಚುರೆಲ್ಲಾ ಮಲ್ಟೋಸೀಡಾ' ಎಂಬ ಬ್ಯಾಕ್ಟೀರಿಯ ದಿಂದ ಉಂಟಾಗುವ ರೋಗವಾಗಿದ್ದು, ದನ, ಎಮ್ಮೆ, ಕುರಿ, ಆಡು, ಹಂದಿ ಮುಂತಾದ ಪ್ರಾಣಿಗಳಲ್ಲಿ ಕಾಣಿಸಿಕೊಳ್ಳುತ್ತದೆ.

**ರೋಗ ಲಕ್ಷಣಗಳು:**

ರೋಗಗ್ರಸ್ಥ ಜಾನುವಾರು ಜ್ವರದಿಂದ ನರಳುತ್ತದೆ. ಜಾನುವಾರು ಮಂಕಾಗುತ್ತದೆ. ಗಂಟಲು, ಕುತ್ತಿಗೆಯ ಕೆಳಭಾಗ, ಎದೆಯ ಮುಂಭಾಗ ಮುಂತಾದ ಕಡೆ ಬಾವು(ಊತ) ಕಾಣಿಸಿಕೊಂಡು ನೋವು ಹಾಗೂ ಉಸಿರಾಟದ ತೊಂದರೆ ಉಂಟಾಗುತ್ತದೆ. ಮೂಗಿನಿಂದ ದ್ರವ ಸೋರಿಕೆ ಕಾಣಿಸಿಕೊಳ್ಳುತ್ತದೆ. ಕೆಲವೊಮ್ಮೆ ಬೇದಿಯೂ ಆಗಬಹುದು. ಚಿಕಿತ್ಸೆ ತಡವಾದಲ್ಲಿ ಮರಣವನ್ನಪ್ಪುತ್ತದೆ.

**ರೋಗಕಾಣಿಸಿಕೊಂಡ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಕ್ರಮಗಳು:**

ರೋಗಗ್ರಸ್ಥ ರಾಸುವನ್ನು ಕೂಡಲೇ ಬೇರ್ಪಡಿಸಿ ಚಿಕಿತ್ಸೆ ಕೊಡಿಸಬೇಕು.

ಕೊಟ್ಟಿಗೆಯನ್ನು ಕ್ರಿಮಿನಾಶಕದಿಂದ ಶುದ್ಧಗೊಳಿಸಬೇಕು.

**ಮುಂಜಾಗ್ರತಾಕ್ರಮಗಳು :-**

ಕೊಟ್ಟಿಗೆಯಲ್ಲಿ ಗಾಳಿಬೆಳಕು ಸರಾಗವಾಗಿ ಬರುವಮತೆ ನಿರ್ಮಿಸಬೇಕು.

ದನಕರುಗಳಿಗೆ ಮಳೆ ಚಳಿಗಾಳಿಯಿಂದ ರಕ್ಷಣೆ ನೀಡಬೇಕು.

ಇಕ್ಕಟ್ಟಾದ ಸ್ಥಳದಲ್ಲಿ ಅಗತ್ಯಕ್ಕಿಂತ ಹೆಚ್ಚು ಜಾನುವಾರುಗಳನ್ನು ಕೂಡಬಾರದು.

ಜಾನುವಾರುಗಳನ್ನು ಹೆಚ್ಚುದೂರದವರೆಗೆ ಸಾಗಾಣಿಕೆ ಮಾಡುವಾಗ ಮಾರ್ಗ ಮದ್ಯೆ ವಿಶ್ರಾಂತಿ ನೀಡಬೇಕು. ಆಹಾರ ಮತ್ತು ನೀರು ಒದಗಿಸಬೇಕು.

**ಮುಂಗಾರು ಪ್ರಾರಂಭವಾಗುವ ಮುನ್ನ 3 ತಿಂಗಳು ಮೇಲ್ಪಟ್ಟ ಕುರಿ, ಮೇಕೆಗಳಿಗೆ ಲಸಿಕೆ ಹಾಕಿಸಬೇಕು.**

# ಮಂಕಾಗುವಿಕೆ, ಉಸಿರಾಟದ ತೊಂದರೆ ಇತ್ಯಾದಿ



# ಗದ್ದದ ಕೆಳಗೆ ಬಾವು



# ಮೂಗಿನಿಂದ ಹಳದಿ ಬಣ್ಣದ ದ್ರವ ಸೋರುವಿಕೆ



# ಗಳಲೇರೋಗ ನಿರೋಧಕ ಲಸಿಕೆ







ಮುಂಗಾರಿಗೆ ಮುನ್ನ ದನ, ಎಮ್ಮೆ, ಕುರಿ, ಮೇಕೆ, ಹಂದಿಗಳಿಗೆ ಹಾಕಿಸಬೇಕು.

# ನೆರಡಿ ರೋಗ

## “ಬ್ಯಾಸಿಲಸ್ ಆಂತ್ರಾಸಿಸ್”


* ದನ, ಎಮ್ಮೆ, ಕುರಿ ಮತ್ತು ಮೇಕೆಗಳಲ್ಲಿ ಕಂಡುಬರುತ್ತದೆ.
* ಸೀಮಿತ ಪ್ರದೇಶಗಳಲ್ಲಿ ಪ್ರತಿವರ್ಷ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತದೆ.
* ಜಾನುವಾರುಗಳ ಹಠಾತ್ ಮರಣ, ನೈಸರ್ಗಿಕ ದ್ವಾರಗಳಲ್ಲಿ ಕಪ್ಪುಮಿಶ್ರಿತ ಕೆಂಪುಬಣ್ಣದ ರಕ್ತಸ್ರಾವ, ಶವ ಸೆಟೆತ ಇಲ್ಲದಿರುವುದು, ಶವ ಊದಿಕೊಳ್ಳುವಿಕೆ ಬೇಗ ಕೊಳೆಯುವಿಕೆ ಇವು ಸಾಮಾನ್ಯ ಲಕ್ಷಣಗಳು.

# ರೋಗ ತಡೆಗಟ್ಟುವ ವಿಧಾನ :

- ಯಾವುದೇ ಜಾನುವಾರುವಿನ ಹಠಾತ್ ಮರಣ ಸಂಭವಿಸಿದಲ್ಲಿ ಕೂಡಲೇ ಹತ್ತಿರದ ಪಶುವೈದ್ಯರಿಗೆ ತಿಳಿಸಿ, ಅವರ ಸೂಚನೆಯಂತೆ ಕ್ರಮ ತೆಗೆದುಕೊಳ್ಳಬೇಕು.
- ಸತ್ತಜಾನುವಾರುವನ್ನು ಆಳವಾದ ಗುಂಡಿಯಲ್ಲಿ 6ಇಂಚು ಪದರವಾಗಿ ಸುಣ್ಣದ ಪುಡಿ ಹರಡಿ, ಮುಚ್ಚಬೇಕು. ಮೇಲ್ಪದರಕ್ಕೆ ಮತ್ತೆ 6 ಇಂಚು ಸುಣ್ಣದಪುಡಿಯನ್ನು ಹರಡಬೇಕು.
- ರೋಗಕ್ಕೆ ತುತ್ತಾದ ಜಾನುವಾರು ತಿಂದುಳಿದ ಆಹಾರ, ಹಾಗೂ ತ್ಯಾಜ್ಯಗಳನ್ನೂ ಸಹ ಇದೇರೀತಿ ವಿಲೇವಾರಿ ಮಾಡಬೇಕು.
- ಕೊಟ್ಟಿಗೆಯನ್ನು ಕ್ರಿಮಿನಾಶಕದಿಂದ ಶುದ್ಧಗೊಳಿಸಬೇಕು. ತುರ್ತು ರೋಗ ಪ್ರತಿಬಂಧಕ ಕ್ರಮಗಳನ್ನು ಕೈಗೊಳ್ಳಬೇಕು.
- ಎಲ್ಲಾ ಜಾನುವಾರುಗಳಿಗೆ ತಪ್ಪದೇ ರೋಗ ನಿರೋಧಕ ಲಸಿಕೆ ಹಾಕಿಸಬೇಕು.
- ಕೆಲವೊಂದು ಪ್ರದೇಶಗಳಲ್ಲಿ ಪ್ರತಿ ವರ್ಷವೂ ರೋಗೋದ್ರೇಕ ಉಂಟಾಗಿ ಜಾನುವಾರುಗಳು ಮರಣಕ್ಕೀಡಾಗುವ ಸಂಭವ ಹೆಚ್ಚಾಗಿರುವುದರಿಂದ ಅಂತಹ ಪ್ರದೇಶಗಳಲ್ಲಿ–

**ಮುಂಜಾಗ್ರತೆಯಾಗಿ ಪ್ರತಿ ವರ್ಷವೂ ಜುಲೈ– ಆಗಸ್ಟ್ ತಿಂಗಳಲ್ಲಿ ರೋಗ ನಿರೋಧಕ ಲಸಿಕೆ ಹಾಕಿಸಬೇಕು.**

# ಆಂತ್ರಾಕ್ಸ್ ನಿರೋಧಕ ಲಸಿಕೆ




ಶಂಕಿತ ಪ್ರದೇಶದಲ್ಲಿ ಜುಲೈ– ಆಗಸ್ಟ್ ತಿಂಗಳಲ್ಲಿ 6 ತಿಂಗಳ ಮೇಲ್ಪಟ್ಟ ಎಲ್ಲಾ ದನ, ಎಮ್ಮೆ, ಕುರಿ ಮತ್ತು ಆಡುಗಳಿಗೆ ರೋಗ ನಿರೋಧಕ ಲಸಿಕೆಯನ್ನು ಹಾಕಿಸಬೇಕು.

# ಬ್ರುಸೆಲ್ಲೋಸಿಸ್/ ಕಂದುಹಾಕುವದು

ಬ್ರುಸೆಲ್ಲಾ ಮೆಲಿಟೆನ್ಸಿಸ್ ಎಂಬ ಸೂಕ್ಷ್ಮಜೀವಿಗಳಿಂದ ಮೇಕೆ ಮತ್ತು ಕುರಿಗಳಲ್ಲಿ ಕಾಣಿಸಿಕೊಳ್ಳುವ ಈ ರೋಗ ಗರ್ಭಪಾತ ಹಾಗೂ ಜನನೇಂದ್ರಿಯಗಳ ಸೋಂಕನ್ನುಂಟುಮಾಡುತ್ತದೆ. ಬ್ರುಸೆಲ್ಲಾ ಒವಿಸ್ ಎಂಬ ಸೂಕ್ಷ್ಮಜೀವಿ ಕೂಡಾ ಈ ರೋಗ ಉಂಟುಮಾಡಬಲ್ಲದು. ಈ ರೋಗ ಕುರಿ ಮತ್ತು ಮೇಕೆಹಿಂಡಿಗಳಲ್ಲಿ ಕಾಣಿಸಿಕೊಂಡಾಗ ಅತಿಶೀಘ್ರವಾಗಿ ಬೇರೆ ಕುರಿ ಮತ್ತು ಮೇಕೆಗಳಲ್ಲಿ ಹರಡುತ್ತದೆ. ರೋಗಗ್ರಸ್ಥ ಪ್ರಾಣಿಗಳು ಕಂದು ಹಾಕಿದಾಗ ಹುಲ್ಲುಗಾವಲಿನಲ್ಲಿ ರೋಗಾಣುಗಳ ಪ್ರಮಾಣ ಹೆಚ್ಚಾಗಿ ಮೇಯುವ ಆರೋಗ್ಯವಂತ ಕುರಿಗಳಿಗೆ ಸುಲಭವಾಗಿ ಹರಡುತ್ತದೆ. ಈ ಸೂಕ್ಷ್ಮಜೀವಿಗಳಿಂದ ಕಲುಷಿತ ಆಹಾರದ ಸೇವನೆ, ಉಸಿರಾಟದ ಮೂಲಕ, ರೋಗಗ್ರಸ್ಥ ಗಂಡುಕುರಿಯ ಜೊತೆ ಗರ್ಭಧಾರಣೆ ಸೇರಿದಾಗ ಈ ರೋಗ ಹರಡುತ್ತದೆ. ರೋಗಪೀಡಿತ ರಾಸುಗಳ ಚಿಕಿತ್ಸೆಯಲ್ಲಿ ನೆರವಾಗುವ ಪಶುಪರೀಕ್ಷಕರು ಹಾಗೂ ಸಹಾಯಕರುಗಳಿಗೆ ಈ ರೋಗ ಹರಡುವ ಸಾಧ್ಯತೆಗಳು ಹೆಚ್ಚಾಗಿಗಿರುತ್ತವೆ.

# ರೋಗದ ಲಕ್ಷಣಗಳು

ಕಂದು ಹಾಕುವದು ಮತ್ತು ಸತ್ತೆ ಬೀಳದಿರುವದು ಈ ರೋಗದ ಮುಖ್ಯ ಲಕ್ಷಣಗಳು. ಹಾಲಿನಲ್ಲಿ ರೋಗಾಣುಗಳು ಕಾಣಿಸಿಕೊಂಡು ಹಸಿ ಹಾಲು ಕುಡಿದಾಗ ಮನುಷ್ಯರಿಗೆ ಈ ರೋಗ ಹರಡುತ್ತದೆ. ಗಂಡುಕುರಿಗಳಲ್ಲಿ ವೃಷಣಕ್ಕೆ ರೋಗ ತಗಲಿ ಊತ, ನೋವು ಉಂಟುಮಾಡುತ್ತದೆ.



# Brucella melintensis-


mainly affects female goats, causing caprine brucellosis - can also affect female sheep.

Hygromas on the knee joint









A stillbirth fetus with necrotic placenta (death of body tissue)

# ರೋಗ ತಡೆಗಟ್ಟುವಿಕೆ

ಕುರಿಮಂದೆಯಲ್ಲಿ ಶುಚಿತ್ವ ಕಾಪಾಡಬೇಕು. ರೋಗಗ್ರಸ್ಥ ಕುರಿಮಂದೆಯಿಂದ ಕುರಿಗಳನ್ನು ಕೊಂಡುಕೊಳ್ಳಬಾರದು. ಕೆಲವು ದೇಶಗಳಲ್ಲಿ ಲಸಿಕೆ ಪ್ರಯೋಗಿಸಿ ರೋಗ ತಡೆಗಟ್ಟುತ್ತಾರೆ. ತಜ್ಞರಿಂದ ಪರೀಕ್ಷಿಸಿ ರೋಗಗ್ರಸ್ಥ ಪ್ರಾಣಿಗಳನ್ನು ಪ್ರತ್ಯೇಕಿಸಿ ಮಂದೆಯಿಂದ ತೆಗೆದುಹಾಕಬೇಕು.

# ಕುರಿಗಳಿಗೆ ಹಾಕಿಸಬೇಕಾದ ಲಸಿಕೆಗಳು

- ಗಳಲೆಬೇನೆ – ಏಪ್ರಿಲ್–ಮೇ ಮಾಹೆಯಲ್ಲಿ.
- ಕರಳುಬೇನೆ – ಜೂನ್– ಜುಲೈ ಮಾಹೆಯಲ್ಲಿ.
- ಪಿ.ಪಿ.ಆರ್. – ಆಗಸ್ಟ್– ಸೆಪ್ಟೆಂಬರ್ ಮಾಹೆಯಲ್ಲಿ.
- ನೀಲಿನಾಲಿಗೆ – ಅಕ್ಟೋಬರ್–ನವೆಂಬರ್ ಮಾಹೆಯಲ್ಲಿ.
- ಸಿಡುಬುಬೇನೆ – ಡಿಸೆಂಬರ್– ಜನವರಿ ಮಾಹೆಯಲ್ಲಿ.
- ಕಾಲು ಬಾಯಿಜ್ವರ – ಫೆಬ್ರವರಿ – ಮಾರ್ಚ್.

ನೆರಡಿ ಬೇನೆ ನಿರೋಧಕ ಲಸಿಕೆಯನ್ನು ಶಂಕಿತ ಪ್ರದೇಶಗಳಲ್ಲಿ ಮಾತ್ರ ಹಾಕಲಾಗುತ್ತದೆ.

"ಹೆಚ್ಚಿನ ವಿವರಗಳನ್ನು ಕೇಳಿ ಪಡೆಯಿರಿ"









# ಜಾನುವಾರುಗಳಲ್ಲಿ ಪರೋಪಜೀವಿಗಳ ಬಾಧೆ, ಇದರಿಂದ ಉಂಟಾಗುವ ಆರ್ಥಿಕ ನಷ್ಟ, ಹಾಗೂ ನಿವಾರಣೋಪಾಯಗಳು

# ಆರ್ಥಿಕ ಹಾನಿ

1.ಉತ್ಪಾದನೆ {ಹಾಲು, ಮಾಂಸ, ಉಣ್ಣೆ} ಕುಂಟಿತಗೊಳ್ಳುತ್ತದೆ.

2. ಗುಣಮಟ್ಟ ಕುಂಟಿತಗೊಳ್ಳುತ್ತದೆ.

3.ಉತ್ಪಾದಿಸಿದ ವಸ್ತುವಿನ ಬೆಲೆ ಕಡಿಮೆಯಾಗುತ್ತದೆ.

4. ಜಾನುವಾರು ಮರಣ.

ಆಂತರಿಕ (ಒಳ) ಪರೋಪಜೀವಿಗಳಿಂದ ಉಂಟಾಗುವ ಆರ್ಥಿಕ ಹಾನಿ ಹಾಗೂ ಇವುಗಳಿಂದ ಜಾನುವಾರುಗಳನ್ನು ರಕ್ಷಿಸಲು ಅನುಸರಿಸಬೇಕಾದ ಕ್ರಮಗಳು.

# ಜಂತು ಭಾದೆಗೆ ಒಳಗಾದ ಕುರಿಗಳು



# ಜಂತು ಭಾದಿತ ಕುರಿ




# ದುಂಡುಹುಳು



# ಚಪ್ಪಟೆ ಹುಳು

## (ಫೇಷಿಯೋಲ– ಹಿಪ್ಯಾಟಿಕ ಮತ್ತು ಫೇಷಿಯೋಲ ಜೈಜಾಂಟಿಕ)



# ಜಂತುಬಾಧೆಯಿಂದ ನರಳುತ್ತಿರುವ ಕುರಿಗಳು



ಗದ್ದದ ಕೆಳಗೆ ಬಾವು



ಬೇಧಿ/ಆಮಶಂಕೆ ಬೇಧಿ



ಬಡಕಲಾಗುವಿಕೆ

## ★ ವಿವಿಧ ಜಂತುನಾಶಕಗಳು ★
















**ಪಶುವೈದ್ಯರ ಸಲಹೆಯ ಮೇರೆಗೆ 3 ತಿಂಗಳಿಗೊಮ್ಮೆ ಜಂತುನಾಶಕವನ್ನು ಕುಡಿಸಬೇಕು**

**ಸಲಹೆ ಪಡೆಯದೇ ಜಂತುನಾಶಕ ಕುಡಿಸುವುದು ಅಪಾಯಕಾರಿ!**

“ಕಾರಲು (ಜಿಗಳಿ) ರೋಗಕ್ಕಾಗಿ”





- ಕ್ಲೊಸೆಂಟಾಲ್
- ಆಕ್ಸಿ ಕ್ಲಾಜನೈಡ್





# ಪ್ಯಾನಾಕ್ಯೂರ್ (ಫೆನ್‌ಬೆಂಡಜ಼ಾಲ್)



# ಟೋಲ್ಜ಼ಾನ್ ಎಫ್(ಆಕ್ಸಿಕ್ಲಾಝ಼ನೈಡ್) ಸಸ್ಪೆನ್ಷನ್




**ಕುರಿಗಳಲ್ಲಿನ ಕಾರಲುರೋಗ (ಜಿಗಳಿರೋಗ) ಕ್ಕೆ ಸಿದ್ದೌಷದ !**




ಕ್ಲೋಸೆಂಟಾಲ್




ಆಕ್ಸಿ ಕ್ಲಾಜನೈಡ್


# ಆಕ್ಸಿಕ್ಲೋಸನೈಡ್ ಬೋಲಸ್



# ಐವರ್‌ಮೆಕ್ಟಿನ್ ಇಂಜೆಕ್ಷನ್



# “ದುಂಡು ಹುಳುಗಳ ಬ ಣೆಗಾಗಿ”



* ಆಲ್ ಬೆಂಡಜಾಲ್
* ಫೆನ್ ಬೆಂಡ



* ಮೆಬೆಂಡಜಾ
* ಕ್ಯಾಬೆಂಡಜಾಲ್
* ಲೆವಾಮಿಸಾಲ್
* ಪೈಪರಾಜಿನ್

# ಜಂತುನಾಶಕ ಔಷಧಿಗಳು

## “ಕುರಿಸಾಕಾಣಿಕೆಯಲ್ಲಿ ತೊಡಗಿರುವರ ಗಮನಕ್ಕೆ”





**ನಿಮ್ಮ ಕುರಿ ಮತ್ತು ಆಡುಗಳಿಗೆ ಜಂತುನಾಶಕ ಔಷಧಿಯನ್ನು ಪಶುವೈದ್ಯರ ಸಲಹೆಯ ಮೇರೆಗೆ ಪ್ರತಿ 3–4 ತಿಂಗಳಿಗೊಮ್ಮೆ ತಪ್ಪದೇ ಕುಡಿಸಿ**






# ಕುರಿಗಳಿಗೆ ಜಂತುನಾಶಕ ಕುಡಿಸುತ್ತಿರುವುದು



ವಿ.ಸೂ : ಪಶುವೈದ್ಯರ ಸಲಹೆಯ ಮೇರೆಗೆ ಅವರ ಮಾರ್ಗದರ್ಶನದಲ್ಲಿ ಕುಡಿಸಬೇಕು

# ಕುರಿಗಳಿಗೆ ಜಂತುನಾಶಕ ಕುಡಿಸುತ್ತಿರುವುದು



# ಜಾನುವಾರು ಆರೋಗ್ಯ ರಕ್ಷಣೆಯಲ್ಲಿ ಹೊರ ಪರೋಪಜೀವಿಗಳ ನಿವಾರಣೆಯ ಮಹತ್ವ.

# ಹೊಪ ಪರೋಪಜೀವಿ ನಾಶಕ ಔಷಧಿಗಳು
# {ಉಣ್ಣೆ, ಹೇನು, ಚಿಕ್ಕಾಟ ನಿವಾರಣೆಗಾಗಿ}







# ಹಚ್ಚುವ ವಿಧಾನ

- ಅನಾರೋಗ್ಯ ಪೀಡಿತ ಜಾನುವಾರು, 3 ತಿಂಗಳ ಒಳಗಿನವುಗಳನ್ನು ಹೊರತು ಪಡಿಸಿ ಇತರ ಜಾನುವಾರುಗಳಿಗೆ ಹಚ್ಚಬಹುದು.
- ಹಚ್ಚುವ ಮುನ್ನ ಜಾನುವಾರುವನ್ನು ಚೆನ್ನಾಗಿ ತೊಳೆಯಿರಿ.
- ಜಾನುವಾರುಗಳ ಸಂಖ್ಯೆಯನ್ನು ಅವಲಂಭಿಸಿ, 1 ಲೀ ನೀರಿಗೆ 1 ಎಮ್.ಎಲ್. ನಂತೆ ಬೆರೆಸಿ ದ್ರಾವಣ ಸಿದ್ಧಪಡಿಸಿಕೊಳ್ಳಿ.
- ಹಚ್ಚುವ ಮೊದಲು ಬಾಯಿಗೆ ಚಿಕ್ಕ ಕಟ್ಟಿ ನಂತರ ಹಚ್ಚಬೇಕು.
- ಕಣ್ಣು, ಗಾಯಗಳಿಗೆ ಔಷಧಿ ಬೀಳದಂತೆ ಎಚ್ಚರವಹಿಸಬೇಕು.
- 1–2 ತಾಸು ಒಣಗಲು ಬಿಟ್ಟು ಮೈ ತೊಳೆದು ಚಿಕ್ಕ ಬಿಚ್ಚಬೇಕು.
- 15 ದಿನ ಬಿಟ್ಟು ನಂತರ ಮತ್ತೊಮ್ಮೆ ಇದೆ ರೀತಿ ಹಚ್ಚಬೇಕು.

“ ಹೆಚ್ಚಿನ ವಿವರಗಳನ್ನು ಕೇಳಿ ತಿಳಿದುಕೊಳ್ಳಿರಿ ”

# ಬ್ಯಾಟಿಕಾಲ್ ಪೋರಾನ್







ಧನ್ಯವಾದಗಳು